<u>ದಿನಾಂಕಃ **22.11.2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ಎ.ಎಸ್.ಜಿ ಪ್ರತಿವಾದಿ ಪರ ವಕೀಲರಿಂದ</u>

ದಾವಾ ಸ್ವತ್ತಿಗೂ ನಮ್ಮ ಊರಿಗೂ ಸುಮಾರು 20 ಕಿ.ಮೀ ಅಂತರವಿದೆ. ದಾವಾ ಸ್ವತ್ತು ವಾದಿ ಹೇಮಾವತಿ ಕಡೆಯಿಂದ ಖರೀದಿ ಮಾಡಿರುತ್ತಾರೆ. ವಾದಿ ಸುಮಾರು 10 ವರ್ಷಗಳಿಂದ ಪರಿಚಯವಿದೆ. ಅವರ ಮನೆಯಲ್ಲಿ ಬಾಡಿಗೆಗೆ ಇದ್ದೆ ಈಗ ಪಕ್ಕದ ಮನೆಯಲ್ಲಿ ಬಾಡಿಗೆಗೆ ಇದ್ದೇನೆ. ನಾನು ದೊಡ್ಡಬಳ್ಳಾಪುರ ನಗರದಲ್ಲಿ ಸುಮಾರು 10 ವರ್ಷಗಳಿಂದ ವಾಸವಿದ್ದೇನೆ. ನಾನು ಸದರಿ ವಾಸವಿರುವ ವಿಳಾಸವನ್ನು ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ನನಗೆ ಪ್ರತಿವಾದಿಯು ಗೊತ್ತಿಲ್ಲ. ಪ್ರತಿವಾದಿ ನನಗೆ ಪರಿಚಯವಿದೆ ಅಥವಾ ಗೊತ್ತಿಲ್ಲ ಎನ್ನುವ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ದಾವಾಸ್ವತ್ತಿನ ಪಶ್ಚಿಮದ ಕಡೆ ನನ್ನ ಜಮೀನು ಇದೆ. ಸದರಿ ಸ್ವತ್ತು ನನ್ನ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ದಾವಾಸ್ವತ್ತಿನ ಸರ್ವೇ ನಂ. 31 ಆಗಿರುತ್ತದೆ. ಅದು ವೀರಭದ್ರನ ಪಾಳ್ಯಕ್ಕೆ ಸೇರಿರುತ್ತದೆ. ದಾವಾಸ್ವತ್ತು ನಗಸಭೆ ಖಾತೆ ಆಗಿರುತ್ತದೆ. ಯಾವ ಆಧಾರದಲ್ಲಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಖಾತಾ ಪತ್ರವನ್ನು ನೋಡಿದ್ದೇನೆ. ನಂಬರ್ ನೆನಪಿಲ್ಲ. ನಿಪಿ-ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ದಾವಾಸ್ವತ್ತಿನ ಚೆಕ್ಕುಬಂಧಿ ಇರುವುದಿಲ್ಲ ಎಂದು ನುಡಿದಿದ್ದಾರೆ. ದಾವಾಸ್ವತ್ತಿನ ಮಾಹಿತಿ ಇದೆ. ಸದರಿ ಸ್ವತ್ತು ಮೂಲತಃ ಚಕ್ರಪಾಣಿ ಅವರಿಗೆ ಸೇರಿದ್ದು, ಸುಬ್ರಮಣಿರವರು ಖರೀದಿ ಮಾಡಿ ನಂತರ ಗಂಗಮ್ಮ ಖರೀದಿ ಮಾಡಿದ್ದು ನಂತರ ಹೇಮಾವತಿಯವರು ಖರೀದಿ ಮಾಡಿರುತ್ತಾರೆ. ಚಕ್ರಪಾಣಿ ಅವರು ಎಷ್ಟು ವಿಸ್ತೀರ್ಣ ಹೊಂದಿದ್ದರು ಎಂದರೆ ಗೊತ್ತಿಲ್ಲ. 2004 ನೇ ಇಸವಿಯಲ್ಲಿ ಚಕ್ರಪಾಣಿಯವರು ಗಂಗಮ್ಮ ಅವರಿಗೆ ಮಾರಾಟ ಮಾಡಿರುತ್ತಾರೆ. ಮಾರಾಟಕ್ಕೆ ಮೊದಲು ಅಥವಾ ನಂತರ ಚಕ್ರಪಾಣಿಯವರು ಭೂಪರಿವರ್ತನೆ ಮಾಡಿರುವುದಿಲ್ಲ. ಗಂಗಮ್ಮ ಅವರಿಗೆ ವಿಸ್ತೀರ್ಣ 33 X 65 ಮಾರಾಟ ಮಾಡಿರುತ್ತಾರೆ.

ಗಂಗಮ್ಮ ಅವರು ಹೇಮಾವತಿಯವರಿಗೆ ಎಷ್ಟು ವಿಸ್ತೀರ್ಣ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಯಾವ ಆಧಾರದ ಮೇಲೆ ಗಂಗಮ್ಮರವರ ಕಡೆಯಿಂದ ಹೇಮಾವತಿಯವರಿಗೆ ಖಾತೆಯಾಯಿತು ಎಂದು ಗೊತ್ತಿಲ್ಲ. ಚಕ್ರಪಾಣಿಯವರಿಗೆ ಸೇರಿದ ಮೂಲ ಸ್ವತ್ತಲ್ಲಿ 4.4 ಗುಂಟೆಯನ್ನು ಪ್ರತಿವಾದಿಯವರು ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಪ್ರತಿವಾದಿಯವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ನನ್ನ ಸ್ವತ್ತಿನ ಹಾಗೂ ದಾವಾ ಸ್ವತ್ತಿನ ಪಕ್ಕದಲ್ಲಿ ಇದೆ ಎಂದು

ನುಡಿಯುತ್ತಾರೆ. ಪ್ರತಿವಾದಿಯವರು ಯಾರಿಗೂ ತೊಂದರೆ ಕೊಟ್ಟಿಲ್ಲ ಎಂದರೆ ನನಗೂ ಮತ್ತು ವಾದಿಗೂ ತೊಂದರೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಸ್ವತ್ತು ಮತ್ತು ದಾವಾ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದಿದ್ದರೂ ಪ್ರತಿವಾದಿಗಳು ನನ್ನ ಹೆಂಡತಿ ವಿರುದ್ಧ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಯ ಸ್ವತ್ತನ್ನು ಕಬಳಿಸಲು ಮತ್ತು ಕಾನೂನು ಬಾಹಿರವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ವಾದಿಗೆ ಸಹಾಯಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ದಾವಾ ಸ್ವತ್ತಿಗೆ ಯಾವುದೇ ತೊಂದರೆ ನೀಡಿರುವುದಿಲ್ಲ ಎಂದರೆ 2018 ನೇ ಇಸವಿಯಲ್ಲಿ ತೊಂದರೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ತೊಂದರೆ ಕೊಟ್ಟಿರುವ ವಿಚಾರ ನನ್ನ ಭಾವನ ಮೂಲಕ ತಿಳಿದಿರುತ್ತದೆ. ಅವರು ತೇರಿನ ಬೀದಿಯಲ್ಲಿದ್ದಾರೆ ಅದು ಸುಮಾರು 300 ಮೀ ದೂರ ಇದೆ. ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಅನ್ಯವ್ಯಕ್ತಿಗಳು ತೊಂದರೆ ಕೊಡುವ ವಿಚಾರ ಹೇಳಿ ಬರೆಸಿಲ್ಲ. ಪ್ರತಿವಾದಿಗಳಿಗೆ ನೀವು ಮತ್ತು ವಾದಿ ತೊಂದರೆ ಕೊಡುತ್ತಿದ್ದರಿಂದ ಪ್ರತಿವಾದಿಗಳು ಪೋಲೀಸರಿಗೆ ದೂರು ದಾಖಲಿಸಿದ್ದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸ್ವತ್ತನ್ನು ನಾನು ಸರ್ವೇ ಮಾಡಿಸಿರುವುದಿಲ್ಲ. ಪ್ರತಿವಾದಿಗಳು ತಮ್ಮ 4.4 ಗುಂಟೆ ಜಮೀನನ್ನು ಸರ್ವೇ ಮಾಡಿಸಿದ್ದಾರೆ ಎಂದರೆ ಅವರ ಅನುಕೂಲಕ್ಕೆ ತಕ್ಕಂತೆ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಅಸ್ತಿತ್ವದಲ್ಲಿ ಇಲ್ಲದೇ ಇರುವ ವಾದಿ ಸ್ವತ್ತನ್ನು ಅಥವಾ ನನ್ನ ಸ್ವತ್ತನ್ನು ನಾನು ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**